KACM030026812022

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಃ
ಚಿಕ್ಕಮಗಳೂರು

ಸಿಸಿ ಸಂಖ್ಯೆ.:**1723/2022**

ಫಿರ್ಯಾದುದಾರರುಃ ರಾಜ್ಯದ ಪರವಾಗಿ ಅರಣ್ಯ ಸಂಚಾರಿ ದಳ,
ಚಿಕ್ಕಮಗಳೂರು.

-ವಿರುದ್ಧ-

ಆರೋಪಿ/ತರು:

1. ಕೃಷ್ಣಯ್ಯ ಬಿನ್ ಲೇಟ್ ರಾಮಯ್ಯ, **50** ವರ್ಷಗಳು, ವಾಸಃ ಮದ್ಲೆಹಳ್ಳಿ ಗ್ರಾಮ, ಕುಪ್ಪಾಳು ಅಂಚೆ, ತಿಪಟೂರು ತಾಲೂಕು, ತುಮಕೂರು ಜಿಲ್ಲೆ.

2. ರಾಜು ಟಿ. ಎನ್. ಬಿನ್ ಲೇಟ್ ನಿರ್ವಾಣಪ್ಪ, **46** ವರ್ಷಗಳು, ವ್ಯವಸಾಯಗಾರರು, ವಾಸಃ ವಾಸಃನೀರುಗುಂಡಿ ಮಠ, ನಿಡಘಟ್ಟ ಅಂಚೆ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

- - -

ದಂಡ ಪ್ರಕ್ರಿಯೆ ಸಂಹಿತೆ ಕಲಂ **313** ರ ರೀತ್ಯಾ ಆರೋಪಿತರ ವಿಚಾರಣೆ

ಪ್ರಶ್ನೆ.1: ಸಾಕ್ಷಿದಾರರು ನಿಮ್ಮ ವಿರುದ್ಧ ನೀಡಿರುವ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರಃ 1 ನೇ ಆರೋಪಿ ಕೇಳಿರುತ್ತೇನೆ

2 ನೇ ಆರೋಪಿ ಕೇಳಿರುತ್ತೇನೆ

ಪ್ರಶ್ನೆ.2: ಪ್ರಾಸಾ-1 ಎಲ್.ಎಂ.ಶರತ್, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 13.04.2022 ರಂದು ಕಚೇರಿಯಲ್ಲಿದ್ದಾಗ ಆರೋಪಿಗಳು ಮಣ್ಣು ಮುಕ್ಕ ಹಾವನ್ನು ಲಕ್ಷ್ಮೀಪುರ ಗ್ರಾಮದ ಲಕ್ಯಾ ಕ್ರಾಸ್ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು, ಸದರಿ ಮಾಹಿತಿ ಮೇರೆಗೆ ಮದ್ಯಾಹ್ನ 2.15 ಕ್ಕೆ ಠಾಣೆಯಿಂದ ಹೊರಟು, ಚಾಸಾ.9 ಮತ್ತು 10 ರವರನ್ನು ಪಂಚರನ್ನಾಗಿ ಮಾಡಿಕೊಂಡು ಮಾಹಿತಿ ಇದ್ದ ಸ್ಥಳಕ್ಕೆ 2.40 ಕ್ಕೆ ಹೋಗಿ

ನೋಡಿದಾಗ, ಆರೋಪಿಗಳು ಪ್ಲಾಸ್ಟಿಕ್ ಚೀಲವನ್ನು ಹಿಡಿದುಕೊಂಡು ನಿಂತಿದ್ದು, ತಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದ್ದು, ಅವರನ್ನು ಸುತ್ತುವರಿದು ಹಿಡಿದು ವಿಚಾರಿಸಿದಾಗ ಸದರಿ ಚೀಲದಲ್ಲಿ ಒಂದು ಮಣ್ಣು ಮುಕ್ಕ ಹಾವು ಇರುವುದು ಕಂಡು ಬಂತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.3: ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿತರನ್ನು ವಿಚಾರಿಸಿದಾಗ ಸದರಿ ಹಾವು ನಮ್ಮ ಜಮೀನಿನಲ್ಲಿ ಸಿಕ್ಕಿರುವುದಾಗಿ ಸದರಿ ಹಾವನ್ನು ಮಾರಾಟ ಮಾಡಲು ಹೊಂದಿರುವುದಾಗಿ ತಿಳಿಸಿದ ಮೇರೆಗೆ ಪಂಚರ ಸಮಕ್ಷಮ ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ, ಹಾವನ್ನು ವಶಕ್ಕೆ ಪಡೆದುಕೊಂಡಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.4: ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಚಾಸಾ.15 ರವರ ಮುಂದೆ ವಶಪಡಿಸಿಕೊಂಡ ಹಾವನ್ನು ಹಾಜರುಪಡಿಸಿ ನಂತರ ಆರೋಪಿಗಳನ್ನು ಹಾಗೂ ವಶಪಡಿಸಿಕೊಂಡ ಹಾವನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.5: ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ವಶಪಡಿಸಿಕೊಂಡ ಹಾವನ್ನು ನ್ಯಾಯಾಲಯದ ಅನುಮತಿ ಪಡೆದು ಚಾಸಾ.12 ರವರಿಗೆ ಹಸ್ತಾಂತರಿಸಿರುತ್ತೇನೆ

ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.6: ಪ್ರಾಸಾ-2 ದೇವರಾಜ್ ಹೆಚ್. ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 13.04.2022 ರಂದು ತಾವು ಕಛೇರಿಯಲ್ಲಿದ್ದಾಗ ಮದ್ಯಾಹ್ನ 1-00 ಗಂಟೆಗೆ ಚಾಸಾ 1 ರವರಿಗೆ ಲಕ್ಷ್ಮೀಪುರ ಗ್ರಾಮದ ಲಕ್ಯಾ ಕ್ರಾಸ್ ಬಳಿ ಆರೋಪಿಗಳು ಮಣ್ಣು ಮುಕ್ಕ ಹಾವನ್ನು ಮಾರಾಟ ಮಾಡಲು ಗಿರಾಕಿಗಳಿಗೆ ಕಾಯುತ್ತಿದ್ದಾರೆ ಎಂದು ಬಂದ ಮಾಹಿತಿಯನ್ನು ತಮಗೆ ತಿಳಿಸಿ ನಂತರ ಚಾಸಾ 1 ರವರು ಚಾಸಾ 9 ಮತ್ತು 10 ರವರಿಗೆ ದೂರವಾಣಿ ಕರೆ ಮಾಡಿ, ಮಾಹಿತಿ ವಿಚಾರ ತಿಳಿಸಿ ಎ ಐ ಟಿ ವೃತ್ತದ ಬಳಿ ಬರುವಂತೆ ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.7: ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಮದ್ಯಾಹ್ನ 2-15 ಕ್ಕೆ ಕಛೇರಿಯಿಂದ ಇಲಾಖಾ ವಾಹನದಲ್ಲಿ ತಾನು, ಚಾಸಾ 1, 3 ರಿಂದ 8 ರವರು ಹೊರಟು ಎ ಐ ಟಿ ವೃತ್ತದ ಬಳಿ ಹೋಗಿ ಚಾಸಾ 9 ಮತ್ತು 10 ರವರಿಗೆ ನೋಟಿಸು ಜಾರಿ ಮಾಡಿ, ಅವರನ್ನು ಇಲಾಖಾ ವಾಹನದಲ್ಲಿ ಕೂರಿಸಿಕೊಂಡು ಲಕ್ಯಾ ಕ್ರಾಸ್ ಬಳಿ ಕಣ್ಣಂಚಿನ ದೂರದಲ್ಲಿ ಆರೋಪಿಗಳು ಪ್ಲಾಸ್ಟಿಕ್ ಚೀಲದಲ್ಲಿ ಏನನ್ನೋ ಹಿಡಿದುಕೊಂಡು ಯಾರಿಗೋ ಕಾಯುತ್ತಿರುವುದು ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.8: ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸಮೀಪಕ್ಕೆ ಹೋದಾಗ ತಮ್ಮನ್ನು

ಕಂಡು ಗಾಬರಿಗೊಂಡು ಓಡಲು ಪ್ರಯತ್ನಿಸಿದವರನ್ನು ಹಿಡಿದು ಪಂಚರ ಸಮಕ್ಷಮ ಪ್ಲಾಸ್ಟಿಕ್ ಚೀಲದಲ್ಲಿ ಏನು ಇದೆ ಎಂದು ವಿಚಾರಿಸಿ ನೋಡಲಾಗಿ ಅದರಲ್ಲಿ ಒಂದು ಮಣ್ಣು ಮುಕ್ಕ ಹಾವು ಇರುವುದಾಗಿ ಹಾಗೂ ಅದನ್ನು ಮಾರಾಟ ಮಾಡಲು ಗಿರಾಕಿಗಳಿಗೆ ಕಾಯುತ್ತಿರುವುದಾಗಿ ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.9: ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, 1 ನೇ ಆರೋಪಿ ಹಾವು ಸಿಕ್ಕ ವಿಷಯವನ್ನು 2 ನೇ ಆರೋಪಿಗೆ ತಿಳಿಸಿದ್ದು ಗಿರಾಕಿಯನ್ನು ಹುಡುಕಿ ಮಾರಾಟ ಮಾಡಿಸಿಕೊಡಬೇಕೆಂದು ಹೇಳಿರುವುದಾಗಿ ತಿಳಿಸಿರುತ್ತಾರೆಂದೂ, ನಂತರ ಸ್ಥಳದಲ್ಲಿಯೇ ಪಂಚರ ಸಮಕ್ಷಮ ಮಹಜರು ಜರುಗಿಸಿ ಹಾವನ್ನು ಅಮಾನತುಪಡಿಸಿಕೊಂಡು ನಂತರ ಆರೋಪಿಗಳನ್ನು ಹಾಗೂ ಸ್ವತ್ತುಗಳೊಂದಿಗೆ ಕಛೇರಿಗೆ ವಾಪಾಸ್ಸಾಗಿದ್ದು, ಚಾಸಾ 1 ರವರು ಮುಂದಿನ ಕ್ರಮ ಕೈಗೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.10:ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಹಾವನ್ನು ಪಶುವೈದ್ಯಾಧಿಕಾರಿಗಳ ಬಳಿ ಪರೀಕ್ಷೆ ಮಾಡಿಸಿ ನ್ಯಾಯಾಲಯದ ಅನುಮತಿ ಪಡೆದು, ಹಾವು ಹಾಗೂ ಚೀಲವನ್ನು ಆರ್ ಎಫ್ ಓ ರವರಿಗೆ ಹಸ್ತಾಂತರಿಸಲಾಗಿದ್ದು ಆ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.11: ಪ್ರಾಸಾ-3 ಚರಣ್ ಕುಮಾರ್ ಜೆ.ಆರ್. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 13.04.2022 ಚಾಸಾ 1 ರವರು ಫೋನ್ ಮೂಲಕ ಮಾಹಿತಿ ವಿಚಾರ ತಿಳಿಸಿ ದಾಳಿ ಮಾಡುವ ಸಲುವಾಗಿ ಎ ಐ ಟಿ ವೃತ್ತದ ಬಳಿ ಬರುವಂತೆ ತಿಳಿಸಿದ್ದು, ತಾನು ಮತ್ತು ಚಾಸಾ 10 ರವರು ಎ ಐ ಟಿ ವೃತ್ತದ ಬಳಿ ಕಾಯುತ್ತಿದ್ದಾಗ, ಚಾಸಾ 1 ಹಾಗೂ ಅವರ ಸಿಬ್ಬಂದಿ ಇಲಾಖಾ ಜೀಪಿನಲ್ಲಿ ಅಲ್ಲಿಗೆ ಬಂದು ತಮಗೆ ನೋಟಿಸು ಜಾರಿ ಮಾಡಿ ತಮ್ಮ ಸಹಿ ಪಡೆದುಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.12: ಪ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅಲ್ಲಿಂದ ತಮ್ಮನ್ನು ಲಕ್ಷ್ಮೀಪುರದ ಲಕ್ಯಾ ಕ್ರಾಸ್ ಬಳಿಗೆ ಕರೆದುಕೊಂಡು ಹೋದಾಗ ಅಲ್ಲಿ ಆರೋಪಿಗಳು ಪ್ಲಾಸ್ಟಿಕ್ ಚೀಲದಲ್ಲಿ ಏನೋ ಇಟ್ಟುಕೊಂಡಿದ್ದು, ತಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದಾಗ ಚಾಸಾ 1 ಹಾಗೂ ಅವರ ಸಿಬ್ಬಂದಿ ಅವರನ್ನು ಹಿಡಿದು ವಿಚಾರಣೆ ಮಾಡಲಾಗಿ ಚೀಲದಲ್ಲಿ ಮಣ್ಣು ಮುಕ್ಕ ಹಾವು ಇರುವುದಾಗಿ ಮತ್ತು ಅದನ್ನು ಮಾರಾಟ ಮಾಡಲು ಬಂದಿರುವುದಾಗಿ ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.13: ಪ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪೋಲೀಸರು ಹಾವಿನ ಉದ್ದ ಮತ್ತು ಅಗಲವನ್ನು ಅಳತೆ ಮಾಡಿ ಪ್ಲಾಸ್ಟಿಕ್ ಚೀಲಕ್ಕೆ ಹಾಕಿ, ತಮ್ಮ ಸಮಕ್ಷಮ ಮಹಜರು ಮಾಡಿ, ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು

ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.14: ಪ್ರಾಸಾ-4 ಸ್ವಾತಿ ಎನ್ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 13-04-2022 ರಂದು ಚಿಕ್ಕಮಗಳೂರು ಅರಣ್ಯ ಸಂಚಾರಿ ದಳದಲ್ಲಿ ಪ್ರಕರಣ ಸಂಖ್ಯೆ 2/22 ಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಅದೇಶದ ಪ್ರಕಾರ ಒಂದು ಮಣ್ಣು ಮುಕ್ಕ ಹಾವನ್ನು ಹಸ್ತಾಂತರ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.15: ಪ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಮಣ್ಣು ಮುಕ್ಕ ಹಾವು ಪ್ರಕರಣದ ಮುಂದಿನ ತನಿಖೆಗೆ ಅವಶ್ಯಕತೆ ಇರುವುದಿಲ್ಲವೆಂದು ತಿಳಿದುಕೊಂಡು ಘನ ನ್ಯಾಯಾಲಯದ ಆದೇಶದಂತೆ ಅದನ್ನು ಸುರಕ್ಷಿತ ಸ್ಥಳದಲ್ಲಿ ಬಿಡಲು ಆದೇಶ ಪಡೆದುಕೊಂಡು ಅದರಂತೆ ದಿಃ 14.04.2022 ರಂದು ಮತ್ತಾವರ ಕೇಂದ್ರದ ಮೇಲಿರುವ ಮತ್ತಾವರ ಅರಣ್ಯ ಪ್ರದೇಶದಲ್ಲಿ ಚಾಸಾ 13 ಮತ್ತು 14 ರವರೊಂದಿಗೆ ಮಣ್ಣು ಮುಕ್ಕ ಹಾವನ್ನು ಅರಣ್ಯದಲ್ಲಿ ಬಿಟ್ಟಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.16: ಪ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಹಾವನ್ನು ಬಿಡುವ ಸಮಯದಲ್ಲಿ ಛಾಯಾಚಿತ್ರ ಮತ್ತು ವಿಡಿಯೋ ಚಿತ್ರೀಕರಿಸಿ ಮತ್ತು ಸದರಿ ಮಣ್ಣು ಮುಕ್ಕ ಹಾವು ಕಣ್ಮರೆಯಾಗುವವರೆಗೂ ಅಲ್ಲೇ ವೀಕ್ಷಿಸಿ ನಂತರ ಸದರಿ ಪ್ರಕ್ರಿಯೆಯನ್ನು

ಪಂಚನಾಮೆ ಮೂಲಕ ದಾಖಲಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.17: ಪ್ರಾಸಾ-5 ಗೌರೀಶ್ ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ 1 ರವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜೀವಂತ ಮಣ್ಣು ಮುಕ್ಕ ಹಾವನ್ನು ಮಾನ್ಯ ನ್ಯಾಯಾಲಯದ ಆದೇಶದಂತೆ ಚಾಸಾ 12 ರವರ ಸುಪರ್ದಿಗೆ ನೀಡಿದ್ದು ಆ ಸಮಯಲ್ಲಿ ಚಾಸಾ 12 ರವರೊಂದಿಗೆ ತಾನು ಮತ್ತು ಚಾಸಾ 14 ರವರು ಜೊತೆಯಲ್ಲಿದ್ದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.18: ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಮಣ್ಣು ಮುಕ್ಕ ಹಾವವನ್ನು ಪಶು ವೈದ್ಯಾಧಿಕಾರಿಗಳ ಆದೇಶದಂತೆ 2 ದಿನಗಳ ಕಾಲ ಪರಿವೀಕ್ಷಣೆ ಯಲ್ಲಿಟ್ಟಿದ್ದು, ಸದರಿ ಹಾವು ಅರೋಗ್ಯವಾಗಿದೆ ಎಂಬುದನ್ನು ದೃಢಿಪಡಿಸಿಕೊಂಡು ದಿನಾಂಕ 16.04.2022 ರಂದು ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಚಾಸಾ 12 ರವರ ಸಮಕ್ಷಮ ನಾನು ಮತ್ತು ಚಾಸಾ 14 ರವರು ಮತ್ತಾವರ ಅರಣ್ಯ ಮೀಸಲು ಅರಣ್ಯ ಪ್ರದೇಶಕ್ಕೆ ಹೋಗಿ ಸದರಿ ಹಾವು ಕಾಡಿಗೆ ಜೀವಂತವಾಗಿ ಬಿಟ್ಟು ಅದು ಕಾಡಿನಿಂದ ಮರೆಯಾದ ತಕ್ಷಣ ತಾವು ಹಿಂದಿರುಗಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.19: ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಮಣ್ಣು ಮುಕ್ಕ

ಹಾವನ್ನು ಕಾಡಿನೊಳಗೆ ಬಿಡುವ ಸಮಯದಲ್ಲಿ ಮಹಜರು ಪ್ರಕ್ರಿಯೆಯನ್ನು ಸಂಜೆ 5-00 ರಿಂದ 5-30 ರ ಸಮಯದಲ್ಲಿ ಜರುಗಿಸಿ ನಂತರ ಕಛೇರಿಗೆ ವಾಪಸ್ಸಾಗಿ ಸ್ಥಳದಲ್ಲಿ ತನ್ನ ಮೊಬೈಲ್‌ನಿಂದ ಮಾಡಿದ್ದ ಛಾಯಾಗ್ರಹಣವನ್ನು ಕಂಪ್ಯೂಟರಿಗೆ ವರ್ಗಾಯಿಸಿಕೊಂಡು ನಂತರ ಅದನ್ನು ಸಿ ಡಿ ಗೆ ವರ್ಗಾಯಿಸಿಕೊಂಡು ಚಾಸಾ 12 ರವರಿಗೆ ಸಿ ಡಿ ಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.20: ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಛಾಯಾಗ್ರಹಣವನ್ನು ಹಾಗೂ ಅದನ್ನು ಸಿ ಡಿ ಗೆ ವರ್ಗಾಯಿಸಿದ್ದಕ್ಕೆ ಕಲಂ 65(ಬಿ) ಪ್ರಮಾಣ ಪತ್ರವನ್ನು ನೀಡಿದ್ದು, ಸದರಿ ಹಾವನ್ನು ಬಿಟ್ಟು ಬರುವ ವಿಚಾರಕ್ಕೆ ಸಂಬಂಧಿಸಿದಂತೆ ತಾನು ತನ್ನ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.21: ಪ್ರಾಸಾ-6 ಗಿರೀಶ್ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 13/04/2022 ರಂದು ಚಾ.ಸಾ.1 ರವರು ಸಿಬ್ಬಂಧಿಗಳ ಮುಖಾಂತರ ಆರೋಪಿತರ ಸ್ವಇಚ್ಛಾ ಹೇಳಿಕೆಯನ್ನು ಪಡೆದು, ನೀಡುವಂತೆ ಕೋರಿಕೊಂಡ ಮೇರೆಗೆ ಮನವಿ ಮತ್ತು ಆರೋಪಿತರನ್ನು ಹಾಜರುಪಡಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.22: ಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿತರು ನೀಡಿದ ಸ್ವಇಚ್ಚಾ ಹೇಳಿಕೆಗಳನ್ನು ದಾಖಲಿಸಿಕೊಂಡು ಚಾ.ಸಾ.1 ರವರಿಗೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.23: ಪ್ರಾಸಾ-7 ಡಾ.ಯಶಸ್ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 13/04/2022 ರಂದು ಚಾ.ಸಾ.1 ರವರು ಒಂದು ರೆಡ್ ಸ್ಯಾಂಡ್ ಹಾವನ್ನು ಹಾಜರುಪಡಿಸಿದ್ದು, ಅದನ್ನು ಪರಿಶೀಲಿಸಿದಾಗ ಅದು ಬದುಕಿದ್ದು, ಆರೋಗ್ಯ ಸ್ಥಿತಿಯು ಉತ್ತಮವಾಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.24: ಪ್ರಾಸಾ-7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಹಾವನ್ನು ಪರಿಶೀಲಿಸಿ ಅದು ರೆಡ್ ಸ್ಯಾಂಡ್ ಹಾವು ಎಂದು ದೃಡೀಕರಿಸಿ, ದೃಡೀಕರಣವನ್ನು ಚಾ.ಸಾ.1 ರವರಿಗೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ 1 ನೇ ಆರೋಪಿ ಸುಳ್ಳು

2 ನೇ ಆರೋಪಿ ಸುಳ್ಳು

ಪ್ರಶ್ನೆ.26: ನಿಮಗೆ ಈ ಮೊಕದ್ದಮೆಯಲ್ಲಿ ಹೆಚ್ಚಿಗೆ ಏನಾದರೂ ಹೇಳುವುದಿದೆಯೇ?

ಉತ್ತರಃ 1 ನೇ ಆರೋಪಿ ಇಲ್ಲ

2 ನೇ ಆರೋಪಿ ಇಲ್ಲ

ಪ್ರಶ್ನೆ.27: ನಿಮ್ಮ ಪರ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡುತ್ತೀರಾ?

ಉತ್ತರಃ 1 ನೇ ಆರೋಪಿ ಇಲ್ಲ

2 ನೇ ಆರೋಪಿ ಇಲ್ಲ

ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಕೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ: 10 ನೇ ದಿವಸ ಸೆಪ್ಟಂಬರ್ ಮಾಹೆ 2025 ನೇ ಇಸವಿ.

- ಸಹಿ -
(ಅನುರಾಧ ಹೆಚ್.ಟಿ. )
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಚಿಕ್ಕಮಗಳೂರು.